ಶತಮಾನೋತ್ಸವ ವಿಶೇಷ ಪುರವಣಿ

# ಆಮಂತ್ರಣ



ಸಮಾಜ ಬಾಂಧವರೇ,

ತಮಗೆ ತಿಳಿದ ಹಾಗೆ 2007–08ನೇ ವರ್ಷಪೂರ್ತಿ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸುಬ್ರಹ್ಮಣ್ಯ ಸಭೆ ತನ್ನ ಶತಮಾನೋತ್ಸವವನ್ನು ಆಚರಿಸುತ್ತಿದೆ. ಶತಮಾನೋತ್ಸವದ ವಿವಿಧ ಕಾರ್ಯಕ್ರಮಗಳನ್ನು ಸದಸ್ಯರೆಲ್ಲ ಸೇರಿ ನಿರ್ಧರಿಸಿದ್ದು ಅದು ಶತ ಶತ ಮನಗಳ ಮಾನದ ಮಾಪಕವಾಗಲೆಂದು ತಾವುಗಳೆಲ್ಲ ಆಶಿಸಿರುತ್ತೀರಿ, ಹಾರೈಸಿದ್ದೀರಿ.

ಅದರ ದ್ಯೋತಕವಾಗಿ ಕಾಸರಗೋಡಿನಲ್ಲಿ ಆರೋಗ್ಯ ಶಿಬಿರ ಮತ್ತು ವ್ಯಕ್ತಿತ್ವ ವಿಕಸನ ಶಿಬಿರ, ಸುಳ್ಯ ಪುತ್ತೂರು ಮಂಗಳೂರಿನಲ್ಲಿ ಒಂದೇ ದಿನ ಒಂದೇ ಹೊತ್ತಿಗೆ ದಂತ ವೈದ್ಯಕೀಯ ಶಿಬಿರ, ಪುರೋಹಿತರ ಸಮಸ್ಯೆಗಳನ್ನು ಅರಿಯಲು ಸುಳ್ಯದ ವೇದಶಾಲೆಯಲ್ಲಿ ಕಾರ್ಯಶಾಲೆ, ಜ್ಯೋತಿಷ್ಯದ ಜ್ಞಾನ ಶಾಪವಾಗದೆ ವರವಾಗಲೆಂದು ಮಂಗಳೂರಿನಲ್ಲಿ ಅರಿವಿನ ಶಿಬಿರ, ಕವಿ ಸಾಹಿತಿ ಮುಖವನ್ನು ಪರಿಚಯಿಸಲು ಉಡುಪಿಯಲ್ಲಿ ಕವಿಗೋಷ್ಠಿ, ಮಂಗಳೂರಿನಲ್ಲಿ ರಕ್ತ ವರ್ಗೀಕರಣ ಶಿಬಿರ, ಕಾಂತಾವರದ ಶಾಲೆಯ ಮಕ್ಕಳಿಗೆ ಬಹುಮಾನ ವಿತರಣೆ, ಕೊಕ್ರಾಡಿಯಲ್ಲಿ ವನಮಹೋತ್ಸವ, ಬೆಳ್ತಂಗಡಿಯಲ್ಲಿ 800 ಶಾಲಾ ಮಕ್ಕಳಿಗೆ ದಂತ ತಪಾಸಣಾ ಶಿಬಿರ, ಮಂಗಳೂರಿನಲ್ಲಿ ನಾಲ್ಕುಚಕ್ರದ ವಾಹನಗಳ ವಾಯುಮಾಲಿನ್ಯ ಪರೀಕ್ಷಣ, ಮೈಸೂರು ಹಾಗೂ ಮಂಗಳೂರಿನಲ್ಲಿ ಯಕ್ಷಗಾನ ನೃತ್ಯ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶತಮಾನೋತ್ಸವ ಸಮಿತಿ ಮಾಡಿಸಿದೆ. ಅದರ ಮೂಲಕ ಸುಬ್ರಹ್ಮಣ್ಯ ಸಭೆ ತನ್ನ ಇರುವಿಕೆಯನ್ನು, ಶಕ್ತಿ ಸಾಮರ್ಥ್ಯವನ್ನು ಸ್ಪಷ್ಟವಾಗಿ ದಾಖಲಿಸಿದೆ. ನೂರನೇ ಹೆಜ್ಜೆಯ ಗುರುತನ್ನು ಶಾಶ್ವತವಾಗಿ ನಿರೂಪಿಸಲು ಶತಮಾನದ ಕಟ್ಟಡವನ್ನು ಚಾಚಿದ ತಮ್ಮೆಲ್ಲರ ಸಹಾಯ ಹಸ್ತಗಳಿಂದ ನಿರ್ಮಿಸಿದೆ.

ಇದೀಗ ತಾವು ಈ ತಮ್ಮೆಲ್ಲರ ಯಶೋಗಾಥೆಯ ವರುಷದ ಅಂತಿಮ ಹಂತ ತಲುಪಲಿದ್ದೇವೆ – ಶೃಂಗೇರಿ ಶ್ರೀ ಶ್ರೀ ಶ್ರೀಗಳ ದಿವ್ಯ ಸಮ್ಮುಖದಲ್ಲಿ ಅವರ ಅಮೃತ ಹಸ್ತದಲ್ಲಿ ನಡೆಯುವ ಸಂಸ್ಥೆಯ ಹಿರಿಮೆಯ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸುವುದರ ಮೂಲಕ, ನೂರು ಸಂವತ್ಸರಗಳಲ್ಲಿ ಕೇವಲ ಒಮ್ಮೆ ದೊರಕಬಹುದಾದ ಅಮೃತ ಘಳಿಗೆಗೆ ಸಾಕ್ಷಿಭೂತರಾಗುವ ಯೋಗ ನಮ್ಮೆಲ್ಲರಿಗೆ ಮೀಸಲಾಗಿದೆ. ನಮಗಾಗಿ ಬರುತ್ತಿರುವ ಜಗದ್ಗುರುಗಳ ಸಾನಿಧ್ಯದ ದಿವ್ಯಾನುಭವವನ್ನು ಸ್ವೀಕರಿಸಿಕೊಂಡು ಪುನೀತರಾಗಿ, ಸಾರ್ಥಕತೆಯ ಮಿನುಗಿನೊಡನೆ ಈ ಭವ್ಯ ದಿವ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಈವರೆಗೆ ತನು–ಮನ–ಧನಗಳಿಂದ ಸರ್ವ ರೀತಿಯ ಸಹಕಾರವನ್ನು ನೀಡಿದ್ದೀರಿ. ಇನ್ನು ಮುಂದಿನ ಕಾರ್ಯಕ್ರಮದಲ್ಲೂ ಇದೇ ರೀತಿಯ ಸಹಕಾರವನ್ನು ನೀಡಿ, ನಮ್ಮ ಭಾಗ್ಯದ ದ್ಯೋತಕವಾಗಿರುವ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ಸಿನಲ್ಲಿ ಭಾಗಿಗಳಾಗಿ ಎಂದು ಹಾರೈಸುತ್ತೇವೆ.

ತಾವೆಲ್ಲ ಬನ್ನಿ, ತಮ್ಮ ಹಿರಿಯರನ್ನು ಕರೆತನ್ನಿ, ನೆರೆಹೊರೆಯವರನ್ನು ಬರಹೇಳಿ, ವಿವಿಧ ಕಾರ್ಯಕ್ರಮಗಳ ವಿವಿರ ತಮಗೆ ದೊರಕುವಂತೆ ಏರ್ಪಾಟು ಮಾಡಲಾಗಿದೆ. ಮೇ 11ರಿಂದ 13ರವರೆಗೆ ಜಗದ್ಗುರುಗಳ ಕಾರ್ಯಕ್ರಮ. 16ರಂದು ಧರ್ಮಸ್ಥಳದ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಸಮಾರೋಪ ಕಾರ್ಯಕ್ರಮಗಳ ಉದ್ಘಾಟನೆ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ನಮ್ಮ ಸಮಾಜದ ಸಾಧಕರನ್ನು ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿರುವ ಹಲವು ಗಣ್ಯರ ಸಮ್ಮುಖದಲ್ಲಿ ಸನ್ಮಾನ ಮಾಡುವ ಕಾರ್ಯಕ್ರಮ ಇತ್ಯಾದಿ ನಡೆಯಲಿದೆ. ತಮ್ಮ ಉಪಸ್ಥಿತಿಯನ್ನು ನೋಡಿ ಹಾರೈಸುವವರಿದ್ದಾರೆ. ತಮ್ಮ ಉಳಿಯುವಿಕೆಗೆ ತಮ್ಮ ಮಿತ್ರರಲ್ಲಿ ವ್ಯವಸ್ಥೆ ಮಾಡಿಸುತ್ತಿದ್ದೇವೆ. ಪ್ರತೀದಿನ ಫಲಹಾರ, ಭೋಜನದ ವ್ಯವಸ್ಥೆ ಇದೆ.

ಬನ್ನಿ ಭಾಗವಹಿಸಿ, ಈ ಆರು ದಿನಗಳನ್ನು ತಮ್ಮೆಲ್ಲರ ಉತ್ಸಾಹಕ್ಕೆ ಕಾರಣವಾದ ಸುಬ್ರಹ್ಮಣ್ಯ ಸಭೆಯ ಎಲ್ಲ ಕಾರ್ಯಕ್ರಮಗಳಿಗೆಂದೇ ಮೀಸಲಾಗಿಡಿ. ಬನ್ನಿ ಭಾಗವಹಿಸಿ, ಸಹಕರಿಸಿ. ನೂರುವರುಷದಲ್ಲಿ ಒಮ್ಮೆ ಮಾತ್ರ ಸಿಗುವ ಅವಕಾಶ ತಮ್ಮದಾಗಿಸಿಕೊಳ್ಳಿ. ಜನಪರ–ಜನಹಿತ ಕಾರ್ಯಕ್ರಮಗಳ ಯಶಸ್ವಿ ನೂರರ ಸಂಭ್ರಮದ ಸರಣಿ ಕಾರ್ಯಕ್ರಮಗಳಲ್ಲಿ ಸರ್ವರೀತಿಯಿಂದ ತಾವು ನಮ್ಮೊಡನಿದ್ದೀರಿ. ಶತಮಾನದ ವೈಭವದ ಅಂತಿಮ ಕ್ಷಣಗಳಿಗೆ ವಿದಾಯ ಹೇಳುವ ಬನ್ನಿ. ಶತಧ್ವನಿಗಳು ಮೊಳಗಲಿ, ನಿಮ್ಮ ಧ್ವನಿ ಎತ್ತರದ್ದಾಗಿರಲಿ.

ಇತೀ ತಮ್ಮವ,

**ಎಂ. ಆರ್. ವಾಸುದೇವ**

ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ

## ಸುಬ್ರಹ್ಮಣ್ಯ ಸಭಾ, ಮಂಗಳೂರು - ನಡೆದು ಬಂದ ದಾರಿ

(...5ನೇ ಪುಟದಿಂದ)

ಮಂಗಳೂರಲ್ಲಿ ಮತ್ತು ನೆರೆಹೊರೆ ಯಲ್ಲಿರುವ ನಮ್ಮ ಸಮಾಜದವರ ಸೌಕರ್ಯಕ್ಕಾಗಿ ಶ್ರೀ ಕುಡ್ವಿ ಆನಂದರಾಯರು ತನ್ನ ಸ್ವಂತ ಭವನದಲ್ಲಿ ಜರಗಿಸುತ್ತಿದ್ದ ಉಪಾಕರ್ಮ ಸಮಾರಂಭವನ್ನು ಸಭಾಸದನವಾದಂದಿನಿಂದ ಸಭಾಸದನದಲ್ಲಿಯೇ ಜರಗಿಸಲು ವ್ಯವಸ್ಥೆ ಮಾಡಿದರು.

1951ರಿಂದ 1954ರ ವರೆಗೆ ಸಭಾ ಸದನಕ್ಕೆ ಬೇಕಾದ ಎಲ್ಲಾ ತರದ ಚರಸೊತ್ತುಗಳನ್ನು ಒದಗಿಸಿಕೊಳ್ಳುವುದು, ಕಟ್ಟೋಣದ ಕೆಲಸವನ್ನು ಸಂಪೂರ್ಣಗೊಳಿಸಿ ಭದ್ರಪಡಿಸುವುದು, ವಿದ್ಯಾರ್ಥಿಭವನವನ್ನು ಯಶಸ್ವಿಯಾಗಿ ಹಂಚಿಕೆಯ ಕ್ರಮದಲ್ಲಿ ನಡೆಯಿಸುವ ಏರ್ಪಾಡು ಮಾಡುವುದು, ಒಂದು ಪುಸ್ತಕ ಭಂಡಾರವನ್ನೂ ವಾಚನಾಲಯವನ್ನೂ ಸಂಘಟಿಸುವುದು, ಸಭಾಮಂದಿರ ನಿಧಿಗೆ ದ್ರವ್ಯ ಸಂಗ್ರಹಿಸಿ ಸಾಲ ಪರಿಹರಿಸುವುದು ಇತ್ಯಾದಿ ಕೆಲಸಗಳೇ ಇದ್ದವು.

9-5-1954ರಲ್ಲು ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಸಭೆಯ ಚತುರ್ಥ ಮಹಾಧಿವೇಶನವು ಜರಗಿತು.

20-4-1956ರಂದು ಶ್ರೀ ಶೃಂಗೇರಿ ಜಗದ್ಗುರು ಶ್ರೀಮದಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು ದಕ್ಷಿಣ ಕನ್ನಡ ಜಿಲ್ಲೆಯ ವಿಜಯಯಾತ್ರೆ ಕೈಕೊಂಡ ಸಂದರ್ಭದಲ್ಲಿ ಅವರನ್ನು ಯಥೋಚಿತವಾಗಿ ಸ್ವಾಗತಿಸಿ, ಸತ್ಕರಿಸಿ, ನಮ್ಮ ಸಮಾಜದ ಕಾರ್ಯಕರ್ತರು ಉಪಚರಿಸಿದರು. ಶ್ರೀ ಶ್ರೀಸನ್ನಿಧಾನಂಗಳವರು 8 ದಿನಗಳವರೆಗೆ ಸಭಾಸದನಲ್ಲಿ ಪರಿವಾರ ಸಮೇತವಾಗಿ ಮೊಕ್ಕಾಂ ಮಾಡಿದರು. ಆಗ ನಗರದ ಮತ್ತು ಜಿಲ್ಲೆಯ ಹಲವಾರು ಮಹನೀಯರು ಅವರನ್ನು ಭೇಟಿಮಾಡಿ ಆಶೀರ್ವಾದ ಪಡೆದರು.

ಶ್ರೀ ಸುಬ್ರಹ್ಮಣ್ಯ ಸಭೆಯ ಐದನೆಯ ಮಹಾಧಿವೇಶನವು ಜರಗಿದುದು ತಾರೀಕು 5-5-1957ರಂದು. 1958-1959 ರಲ್ಲಿ ಸಭೆಯ ಸುವರ್ಣೋತ್ಸವ ಸಮಾರಂಭವನ್ನು ಜರಗಿಸಬೇಕೆಂದೂ, ಆ ಉತ್ಸವದ ಸ್ಮಾರಕವಾಗಿ ಸುವರ್ಣೋತ್ಸವ ಮಂದಿರವನ್ನು ರಚಿಸಬೇಕೆಂದೂ ಮಹಾಸಭೆಯಲ್ಲಿ ನಿರ್ಣಯಗಳಾದುವು. ಆಡಳಿತ ಮಂಡಳಿಗೆ ಚುನಾವಣೆಗಳೂ ನಡೆದುವು.

1) ಶ್ರೀ ಎ. ಕೃಷ್ಣ ರಾವ್, ಅಧ್ಯಕ್ಷರು 2) ಶ್ರೀ ಬಿ. ಭುಜಂಗ ರಾವ್ ಕಾರ್ಯದರ್ಶಿ 3) ಶ್ರೀ ಡಾ| ಯಂ. ಸಿ. ಶಾಸ್ತ್ರಿ 4) ಶ್ರೀ ಬಿ. ಭವಾನಿ ರಾವ್ 5) ಶ್ರೀ ಯನ್. ಯಸ್. ಉಪಾಧ್ಯಾಯ 6) ಶ್ರೀ ಟಿ. ಬಾಬು ರಾವ್ 7) ಶ್ರೀ ಯನ್. ಯಸ್. ವೆಂಕಟ್ರಾವ್ 8) ಶ್ರೀ ಬಿ. ನರ್ಸಪ್ಪಯ್ಯ 9) ಶ್ರೀ ಕೆ. ಯಸ್. ಆನಂದ ರಾವ್ ಇವರುಗಳನ್ನು ಆರಿಸಿ ಸಮಿತಿ ರಚಿಸಿದರು.

1959ರಿಂದ 2003ರ ವರೆಗೆ ಸಭೆಯು ನಿಧಾನ ಗತಿಯಲ್ಲಿ ನಡೆಯುತ್ತಾ ಸಾಂಪ್ರದಾಯಿಕ ಕಾರ್ಯಕ್ರಮಗಳು ನೆರವೇರುತ್ತಿತ್ತು

2003ರಲ್ಲಿ ಹೊಸ ಕಾರ್ಯಕಾರಿ ಸಮಿತಿಯು ಆರಿಸಲ್ಪಟ್ಟು ಅವರು ಸುಬ್ರಹ್ಮಣ್ಯ ಸಭೆಯ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಬೇಕೆಂದೂ ಅದಕ್ಕೆ ಹೊಸ ಕಟ್ಟಡಗಳನ್ನು ನಿರ್ಮಿಸಬೇಕೆಂದೂ ಯೋಜನೆಗಳನ್ನು ಹಾಕಿಕೊಂಡಿತು. 2003ರಿಂದ 2008ರವರೆಗೆ ಪ್ರತಿ ವರ್ಷ ಹೊಸ ಹೊಸ ಕಟ್ಟಡವನ್ನು ಸೇರಿಸಿಕೊಂಡು ಈಗ ಇವೆಲ್ಲಾ ಕಟ್ಟಡಕ್ಕೆ ಕಿರೀಟಪ್ರಾಯವಾಗಿ ಸುಬ್ರಹ್ಮಣ್ಯ ಸಭಾಸದನವು 12-05-2008ರಂದು ಜಗದ್ಗುರುಗಳಾದ ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಡುವುದು. ಈಗಿನ ಹೊಸ ಸುಬ್ರಹ್ಮಣ್ಯ ಸಭಾ ಕಟ್ಟಡ ಸಂಕೀರ್ಣದಲ್ಲಿ 108 ವಿದ್ಯಾರ್ಥಿಗಳಿಗೆ ಇರಲು ಅವಕಾಶ ಇರುವ ಸುಬ್ರಹ್ಮಣ್ಯ ವಿದ್ಯಾರ್ಥಿ ನಿಲಯವನ್ನೂ, 10 ಹಿರಿಯ ನಾಗರಿಕರಿಗೆ ಬೇಕಾಗುವ ವಸತಿ ಸೌಕರ್ಯವಿದ್ದು ಧಾರ್ಮಿಕ ಕಾರ್ಯಕ್ರಮಗಳಿಗೆ ಗುರುಭವನವನ್ನು ಮತ್ತು ಸುಬ್ರಹ್ಮಣ್ಯ ಕೋ-ಆಪರೇಟಿವ್ ಬ್ಯಾಂಕನ್ನು ಹೊಂದಿರುತ್ತದೆ. 2003ರಿಂದ ಈಗಿನವರೆಗೆ ಸುಮಾರು ಒಂದೂವರೆ ಕೋಟಿಯಷ್ಟು ವೆಚ್ಚದಲ್ಲಿ ಈ ಸಂಕೀರ್ಣವನ್ನು ಪೂರ್ಣಗೊಳಿಸಲಾಗಿದೆ. ಇದಕ್ಕಾಗಿ ಶ್ರಮಿಸಿದ ಕಾರ್ಯಕಾರಿ ಸಮಿತಿಯ ಈಗಿನ ಸದಸ್ಯರು ಈ ಕೆಳಗಿನಂತಿದ್ದಾರೆ.

ಎನ್. ಕೆ. ಜಗನ್ನಿವಾಸರಾವ್-ಅಧ್ಯಕ್ಷ, ಸಿ.ಎಸ್.ರಾವ್-ಉಪಾಧ್ಯಕ್ಷ, ಕರುಣಾಕರ ರಾವ್ ಬೆಳ್ಳೆ - ಕಾರ್ಯದರ್ಶಿ, ಬಿ.ಎಸ್.ಅನಿಲ್‌ರಾವ್ - ಜೊತೆ ಕಾರ್ಯದರ್ಶಿ, ಬಿ.ಎಸ್. ವಿನೋದ್ ರಾವ್, ಪ್ರದೀಪ್‌ರಾವ್ ಕೆ., ಎನ್.ಎಸ್. ರಾಮಸ್ವಾಮಿ, ಎಮ್.ಎಸ್. ರಘುನಾಥರಾವ್, ಎಮ್.ನರೇಂದ್ರ, ಎಮ್.ಆರ್. ವಾಸುದೇವ್, ಬಿ.ಎಸ್.ಸುರೇಶ್, ಉಮೇಶ್ ಶ್ಯಾನುಭಾಗ್, ಚೇತನ್ ಶರ್ಮ, ಶ್ರೀಮತಿ ಸುಮಂಗಲ ಪ್ರಭಾಕರ್, ಪಿ. ಮುರಳೀಧರ್ ರಾವ್, ಎನ್. ಎಸ್. ನಟರಾಜ್, ಬಿ. ಭಾಸ್ಕರ್‌ರಾವ್, ಗೋಪಾಲಕೃಷ್ಣ ಕೋಲ್ಪೆ, ಸಂತೋಷ್ ಕುಮಾರ್ ಯು., ಶ್ರೀಮತಿ ವೈಜಯಂತಿ ಬೆಳ್ಳೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಟಿ. ಲಕ್ಷ್ಮೀನಾರಾಯಣ ರಾವ್, ಎ.ವಿ.ಶ್ಯಾನುಭಾಗ್, ಸಂಜಯರಾವ್ ಪಿ., ಡಾ| ಎ.ಪಿ.ಕೃಷ್ಣ.

## ಶತಮಾನೋತ್ಸವ ಕಾರ್ಯಕ್ರಮಗಳು

(...6ನೇ ಪುಟದಿಂದ)

ಸಮಿತಿ ಹಾಗೂ ಉಡುಪಿಯ ದ್ರಾವಿಡ ಸ್ಥಾನಿಕ ಬ್ರಾಹ್ಮಣ ಸಂಘ ಇದರ ಜಂಟಿ ಸಂಯೋಜನೆಯಿಂದ ರೂಪುಗೊಂಡು ನಮ್ಮ ಸಮಾಜದ ಬಹಳ ಹಿರಿಯ ಮತ್ತು ಕಿರಿಯ ಸಾಹಿತಿಗಳನ್ನು ಕಲೆ ಹಾಕುವ ಪ್ರಯತ್ನವು ಯಶಸ್ವಿಯಾಯಿತು. ಹಿರಿಯ ಸಾಹಿತಿ ಹಾಗೂ ಕಲಾ ವಿಮರ್ಶಕರು ಆಗಿರುವ ಎ. ಈಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ಸಮ್ಮೇಳನದಲ್ಲಿ ಕಥಾಗೋಷ್ಠಿ, ಕವಿತಾ ಗೋಷ್ಠಿ, ಹಾಗೂ ಹನಿಗವನ / ಚುಟುಕುಗೋಷ್ಠಿಗಳೆಂಬ ಮೂರು ವಿವಿಧ ಸಾಹಿತ್ಯಾತ್ಮಕ ಚಟುವಟಿಕೆಗಳು ಸಾಕಾರಗೊಂಡವು. ಅದರಲ್ಲಿ ಪ್ರಸಿದ ಕಥೆಗಾರ ಎಂ. ವ್ಯಾಸರಂತ ಹಿರಿಯರೊಂದಿಗೆ ಈಗ ತಾನೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟ ಯುವ ಪ್ರತಿಭೆಗಳು ಬೆರೆಯುವಂತಾದದ್ದು ಸಂತಸದ ವಿಷಯ. ಬೆಳಿಗ್ಗೆ ಗಂಟೆ 9-30 ಉದ್ಘಾಟನೆಯೊಂದಿಗೆ ಪ್ರಾರಂಭವಾದ ಸಾಹಿತ್ಯ ಕೂಟ ಸಾಯಂಕಾಲ ಸಮರೋಪ ಸಮಾರಂಭದೊಂದಿಗೆ ಮುಕ್ತಾಯಗೊಂಡಾಗ ಸಂಯೋಜಕರಿಗೆ ಸಫಲತೆಯ ಅನುಭೂತಿ, ದೊರಕಿತು.

ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹ ಕೊಡಲು 20-01-2008ರಂದು ಕೆನರಾ ಹಿರಿಯ ಪ್ರಾಥಮಿಕ ಶಾಲೆ, ಮಂಗಳೂರು ಇಲ್ಲಿ ಕ್ರೀಡಾಕೂಟವನ್ನು ಆಯೋಜಿಸ ಲಾಯಿತು. ಬೆಳಿಗ್ಗೆ 9-00 ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮ ಸಾಯಂಕಾಲದವರೆಗೆ ವಿಸ್ತಾರಗೊಂಡಿತು.

ಈ ಶತಮಾನೋತ್ಸವ ಆಚರಣೆಯ ಹೊಸ್ತಿಲಲ್ಲಿ ನಮ್ಮವರಾದ ಅಪಯಶ ಬರೆದ ಸತ್ಯದರ್ಶನ ಹಾಗೂ ಬಿ. ಬಾಲಚಂದ್ರ ರಾವ್ ಬರೆದ 'ಶ್ರೀ ಆದಿಶಂಕರಾಚಾರ್ಯ' ಪುಸ್ತಕಗಳ ಪ್ರಕಟಣೆಯಲ್ಲಿ ಅಳಿಲು ಸೇವೆ ಮಾಡಲು ಸಮಿತಿಗೆ ಅವಕಾಶ ಸಿಕ್ಕಿತು.

ಶ್ರೀ ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವದ ಆಚರಣೆಯ ಮೂಲಕ ಸುಮಧುರ ಬಾಂಧವ್ಯದ ತಂಗಾಳಿ ಸಮಾಜ ಬಾಂಧವರ ಹೃದಯವನ್ನು ತಲುಪಲು ಅವಕಾಶ ಸಿಕ್ಕಿತು ಎನ್ನುವ ಧನ್ಯತಾಭಾವ ಸಮಿತಿಗಿದೆ.